KACM010006292020

Presented on : 07-03-2020
Registered on : 07-03-2020

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAJESHWARI N. HEGDE)**
**SPL.C/36/2020**

Complainant(PROSECUTION):
State by Excise Police, Chikkamagaluru, rep.by P.P. CKM

**VERSUS**

Accused:
1. Onkarappa/Onkara S/o Lt.Siddegowda, 50 yrs, Agri., R/at Machenahalli V, Lakya H, CKM.
2:Mallikarjuna S/o Lt.Siddegowda, 45 yrs, Agri., R/at Machenahalli V,Lakya H, CKM

---

State Complainant}: Public Prosecutor, CKM,
Advocate for accused: B.M. LAXMANA GOWDA.

---

**Offence punishable under : 13(1)(b),K.E.Act of KARNATAKA EXCISE ACT 1965, 20(i),20(a),8(b),ofNDPS,Act of Narcotic Drugs and Psychotropic Substances (Amendment) Act, 2001,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು

**Spl.C. No: 36/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸತೀಶ್ ಕೆ.ಎಸ್. | ಪ್ರಾ.ಸಾ.- 05 |
| ತಂದೆ ಹೆಸರು | : | ಸಿದ್ದಪ್ಪ ಶೆಟ್ಟಿ | ಚಾ.ಸಾ.- 08 |
| ವಯಸ್ಸು | : | 42 ವರ್ಷ | |
| ಉದ್ಯೋಗ | : | ಅಬಕಾರಿ ಪಿ.ಎಸ್.ಐ. ಬೇಲೂರು | |
| ವಾಸ ಸ್ಥಳ | : | ಬೇಲೂರು | |

**ದಿನಾಂಕಃ 27-01-2026**

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀಮತಿ ವೀಣಾ -ಪಿ.ಪಿ.ಯವರಿಂದಃ**

1. ದಿನಾಂಕಃ 18-02-2017 ರಿಂದ 06-02-2024 ರವರೆಗೆ ನಾನು ಚಿಕ್ಕಮಗಳೂರು ಉಪ ವಿಭಾಗ ವಲಯದಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 07-11-2019 ರಂದು ಅಬಕಾರಿ ನಿರೀಕ್ಷಕರ ಆದೇಶದಂತೆ ಈ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ರಾಸಾಯನಿಕ ಪರೀಕ್ಷೆಗೆ ತೆಗೆಯಲಾದ ಮುದ್ದೆಮಾಲುಗಳು ಹಾಗೂ ರಾಸಾಯನಿಕ ತಜ್ಞರಿಗೆ ಬರೆದ ಪತ್ರದೊಂದಿಗೆ ರಾಸಾಯನಿಕ ಪರೀಕ್ಷೆಗಾಗಿ ಕೊಟ್ಟು ಹಿಂಬರಹವನ್ನು ವಾಪಾಸು ತಂದಿರುತ್ತೇನೆ. ಅಬಕಾರಿ ನೀಡಿಕ್ಷಕರು ರಾಸಾಯನಿಕ ತಜ್ಞರಿಗೆ ಬರೆದ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ನಿ.ಪಿ. 17 ಎಂದು ಗುರುತಿಸಲಾಯಿತು.

3. ದಿನಾಂಕಃ 09-12-2019 ರಂದು ಬೆಂಗಳೂರಿನ ರಾಸಾಯನಿಕ ತಜ್ಞರಿಂದ ಮುದ್ದೆಮಾಲುಗಳು ಹಾಗೂ ರಾಸಾಯನಿಕ ಪರೀಕ್ಷಾ ವಿಶ್ಲೇಷಣಾ ವರದಿಯನ್ನು ಪಡೆದುಕೊಂಡು ಬಂದು ಅಬಕಾರಿ ನಿರೀಕ್ಷಕರ ಮುಂದೆ ಹಾಜರುಪಡಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ.ಎಂ.ಎಲ್.ಜಿ. ವಕೀಲರಿಂದಃ**

4. ದಿನಾಂಕಃ 07-11-2019 ರಂದು ನಾನು ತೆಗೆದುಕೊಂಡ ಹೋದ ಮುದ್ದೆಮಾಲುಗಳ ಮೇಲೆ ಯಾವ ಮುದ್ರೆ ಇತ್ತು ಎಂದು ನಾನು ಗಮನಿಸಿಲ್ಲ. ರಾಸಾಯನಿಕ ತಜ್ಞರಿಂದ ಬಂದ ವರದಿ ಇದೆ ಎಂದು ಹೇಳಲಾದ ಕವರಿನ ಮೇಲೆ, ಮುದ್ದೆಮಾಲುಗಳ ಮೇಲೆ ಏನು ಮುದ್ರೆ ಇತ್ತು ಎಂದು ನಾನು ಗಮನಿಸಿಲ್ಲ. ದಿನಾಂಕಃ 07-11-2019 ರಂದು ನಾನು ರಾಸಾಯನಿಕ ಪರೀಕ್ಷೆಗೆಂದು ಮುದ್ದೆಮಾಲುಗಳನ್ನು ತೆಗೆದುಕೊಂಡು ಹೋಗಿಲ್ಲ ಹಾಗೂ

ದಿನಾಂಕಃ 09-12-2019 ರಂದು ರಾಸಾಯನಿಕ ತಜ್ಞರಿಂದ ವರದಿಯನ್ನು ಹಾಗೂ ಮುದ್ದೆಮಾಲುಗಳನ್ನು ತಂದಿಲ್ಲ ಎಂದು ಹೇಳುವುದು ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-27-01-2026
(ರಾಜೇಶ್ವರಿ ಎನ್ ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-

Visit **ecourts.gov.in** for updates or download mobile app “**eCourts Services**” from Android or iOS